**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 889/2022**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ಧ-**

**ಆರೋಪಿ/ತರು** ಃ ಮುರುಗೇಶ್ ಹೆಚ್ ಎನ್ ಬಿನ್ ನಟರಾಜ, 29 ವರ್ಷ, ಚಾಲಕ, ವಾಸಃಹುಬ್ಬನಹಳ್ಳಿ ಗ್ರಾಮ, ಬಾಳೆಕೊಪ್ಪ ಪೋಸ್ಟ್, ಶಿವಮೊಗ್ಗ ತಾಃ ಶಿವಮೊಗ್ಗ ಜಿಲ್ಲೆ.

**-ಃಆಪಾದನೆಃ-**

ದಿನಾಂಕಃ22.05.2022 ರಂದು ಬೆಳಿಗ್ಗೆ 5-30 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಚಾಸಾ-1 ರವರ ಪತಿ ಮೂರ್ತಿರವರು ಲಿಂಗದಹಳ್ಳಿಯ ನೆಂಟರ ಮನೆಗೆ ಹೋಗಿ ಬರುವುದಾಗಿ ಹೇಳಿ ಅವರ ಬಾಬ್ತು ಕೆಎ-11/ಜೆಡ್-3663 ರ ಮಾರುತಿ ಓಮಿನಿ ಕಾರನ್ನು ಚಾಲನೆ ಮಾಡಿಕೊಂಡು ಎಂ ಸಿ ಹಳ್ಳಿ ಹತ್ತಿರ ರಾಷ್ಟ್ರೀಯ ಹೆದ್ದಾರಿ- 206 ರಲ್ಲಿ ರಸ್ತೆಯ ಎಡ ಬದಿಯಲ್ಲಿ ಚಲಾಯಿಕೊಂಡು ಹೋಗುತ್ತಿರುವಾಗ ಆರೋಪಿಯಾದ ನೀವು ಬೆಂಗಳೂರು ಕಡೆಯಿಂದ ಶಿವಮೊಗ್ಗ ಕಡೆ ಹೋಗಲು ಚಾಸಾ-14 ರವರ ಮಾಲೀಕತ್ವದ ಕೆಎ-20/ಸಿ-4133 ರ ಪ್ರಕಾಶ್ ಟ್ರಾವಲ್ಸ್ ಸ್ಲೀಪರ್ ಕೋಚ್ ಬಸ್ ನ್ನು ದುಡುಕು ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ-1 ರವರ ಸದರಿ ಕಾರಿಗೆ ಡಿಕ್ಕಿಪಡಿಸಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.279** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿದ ಪರಿಣಾಮ ಚಾಸಾ-1 ರವರ ಪತಿ ಮೂರ್ತಿರವರು ಕಾರಿನ ಮಂಭಾಗದಲ್ಲಿ ಸಿಕ್ಕಿಹಾಕಿಕೊಂಡು ತಲೆಗೆ, ಎದೆಗೆ, ಮೈಕೈಗೆ, ಕಾಲುಗಳಿಗೆ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.304 ಎ** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?

ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)

ದಿನಾಂಕಃ 18.12.2023

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ

ಆರೋಪಿಯ ಸಹಿಃ